# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 Volume:01 • ಸಂಚಿಕೆ:253 Issue:253 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 03.03.2024 03.03.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2





ಮೈಕ್ರೋ ನ್ಯೂಸ್

## ಕೊಟ್ಟೂರು ಶ್ರೀ ಗುರುಬಸವೇಸ್ವರಸ್ವಾಮಿ ರಥೋತ್ಸವ ಮಾ. 4ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಹಿಂದೂ ಧಾರ್ಮಿಕ ಸಂಸ್ಥೆಗಳು, ಧರ್ಮದಾಯ ದತ್ತಿ ಇಲಾಖೆ ಅಧಿನದಲ್ಲಿ ಬರುವ ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಶ್ರೀ ಗುರುಬಸವೇಶ್ವರಸ್ವಾಮಿ ದೇವಸ್ಥಾನದ ರಥೋತ್ಸವವು ಮಾರ್ಚ್ 4ರಂದು ನಡೆಯಲಿದೆ. ಫೆಬ್ರವರಿ 29ರಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಾ.3ರಂದು ರಾತ್ರಿ ಬೆಳ್ಳಿ ರಥದಲ್ಲಿ ವೃಷಭ ವಾಹನೋತ್ಸವ ಕಾರ್ಯಕ್ರಮ, ಮಾ.4ರಂದು ಸಯಂಕಾಲ ಶ್ರೀ ಸ್ವಾಮಿಯ ಮಹಾ ರಥೋತ್ಸವ ನಡೆಯಲಿದೆ. ಈ ಸಮಾರಂಭದಲ್ಲಿ ಬೆಂಗಳೂರಿನ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಾದ ಬಸವರಾಜೇಂದ್ರ ಹೆಚ್, ವಿಜಯನಗರ ಡಿಸಿ ಎಂ.ಎಸ್.ದಿವಾಕರ, ವಿಜಯನಗರ ಮತ್ತು ಬಳ್ಳಾರಿಯ ಹಿಂದೂ ಧಾಮಿಕ ಸಂಸ್ಥೆ ಮತ್ತು ಧರ್ಮದಾಯ ದತ್ತಿ ಇಲಾಖೆಯ (ಪ್ರಭಾರ) ಸಹಾಯಕ ಆಯುಕ್ತರಾದ ಹೆಚ್.ಗಂಗಾಧರಪ್ಪ, ಶ್ರೀ ಗುರುಬಸವೇಶ್ವರ ಸ್ವಾಮಿ ದೇವಸ್ಥಾನದ ಪ್ರಧಾನ ಧರ್ಮಕರ್ತರಾದ ಸಿ.ಹೆಚ್.ಎಂ.ಗಂಗಾಧರ, ದೇವಸ್ಥಾನದ ಇಒ ಕೃಷ್ಣಪ್ಪ ಬಿ.ಎಂ ಮತ್ತು ತಾಲೂಕಿನ ದೈವದವರು, ಗಣ್ಯರು, ಸರ್ವಾಜನಿಕರು ಭಾಗವಹಿಸುವರು.

# ಇಂದು ಸಿಎಂ ಸಿದ್ಧರಾಮಯ್ಯರಿಂದ ಪಲ್ಸ್ ಪೋಲಿಯೊ ಅಭಿಯಾನಕ್ಕೆ ಚಾಲನೆ

**ಹಂಪಿ ಟೈಮ್ಸ್ ಹೊಸಪೇಟೆ**

ಸಿಎಂ ಸಿದ್ದರಾಮಯ್ಯನವರು ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಹಮ್ಮಿಕೊಂಡಿರುವ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಎಚ್.ಆರ್. ಗವಿಯಪ್ಪ ಹೇಳಿದರು.

ನಗರದ ಶಾಸಕರ ಜನಸಂಪರ್ಕ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಭಾರತ ಪೋಲಿಯೊ ಮುಕ್ತ ರಾಷ್ಟ್ರವಾಗಿದ್ದು, ಇತರೆ ದೇಶದದಿಂದ ಆಗಮಿಸುವ ಪ್ರಾವಾಸಿಗರಿಂದ ಪೋಲಿಯೊ ವೈರಸ್ ಹರಡಬಹುದು ಎನ್ನುವ ಭೀತಿ ಇದೆ. ಈ ಹಿನ್ನಲೆಯಲ್ಲಿ ಕ್ಷೇತ್ರ ಹಾಗೂ ಜಿಲ್ಲೆಯ ಜನರು 5 ವರ್ಷದ ಎಲ್ಲಾ ಮಕ್ಕಳಿಗೂ ಪಲ್ಸ್ ಪೋಲೀಯೊ ಲಸಿಕೆ ಹಾಕಿಸಬೇಕು ಎಂದು ಮನವಿ ಮಾಡಿದರು.

**ಮುಂದಿನ ಆಯವ್ಯಯದಲ್ಲಿ ಅನುದಾನ ಭರವಸೆ:** ಗ್ಯಾರಂಟಿ ಯೋಜನೆಗಳ ಜಾರಿಯಿಂದ ಹಣಕಾಸಿನ ಮೇಲಿನ ಒತ್ತಡ ಇರುವುದರಿಂದ ಈ ಬಾರಿ ಜಿಲ್ಲೆಗೆ ಹೆಚ್ಚಿನ ಅನುದಾನ ಲಭ್ಯವಾಗಿಲ್ಲ. ಬಹುದಿನಗಳಿಂದ ಚಿತ್ರದುರ್ಗ ಮೆಡಿಕಲ್ ಕಾಲೇಜಿಗೆ ಬೇಡಿಕೆ ಇದ್ದರಿಂದ ಅಲ್ಲಿಗೆ ಅನುದಾನವನ್ನು



ಮುಖ್ಯಮಂತ್ರಿಗಳು ನೀಡಿದ್ದಾರೆ. ನಿಗಮ ಮಂಡಳಿ ನೇಮಕದಲ್ಲಿ ಜಿಲ್ಲೆಯನ್ನು ಕಡೆಗಣಿಸಿಲ್ಲ. ಪಕ್ಷಕ್ಕಾಗಿ ದುಡಿದವರಿಗೆ ಸೂಕ್ತ ಸ್ಥಾನಮಾನ ನೀಡಲಾಗುವುದು ಎಂದು ಪತ್ರಕರ್ತರ ಪ್ರಶ್ನೆ ಶಾಸಕ ಎಚ್.ಆರ್.ಗವಿಯಪ್ಪ ಉತ್ತರಿಸಿದರು. ಜಿಲ್ಲಾ ನೋಡಲ್ ಅಧಿಕಾರಿ ಡಾ.ನಾಗರಾಜ್, ಜಿಲ್ಲಾ ಲಸಿಕಾಧಾರಿ ಡಾ.ಜಿ.ಜಂಬಣ್ಣ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

> ವಿಜಯನಗರ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು, ಸಕ್ಕರೆ ಕಾರ್ಖಾನೆ ಸ್ಥಾಪನೆ ಬೇಡಿಕೆಯಿದೆ. ಮುಂದಿನ ವರ್ಷದ ಆಯವ್ಯಯದಲ್ಲಿ ಅನುದಾನ ಲಭಿಸುವ ವಿಶ್ವಾಸವಿದೆ. ಸಕ್ಕರೆ ಕಾರ್ಖಾನೆಗಾಗಿ ನಾಗೇನಹಳ್ಳಿ ಹತ್ತಿರದ ಗುರುತಿಸಿರುವ 77 ಎಕರೆ ಜಾಗ ಸೂಕ್ತವಾಗಿದೆ. ಇನ್ನೂ 10 ರಿಂದ 20 ಎಕರೆ ಜಾಗ ಲಭಿಸಬಹುದು. ಅಗತ್ಯ ಬಿದ್ದರೆ ಅಲ್ಪ ಪ್ರಮಾಣ ಭೂಮಿಯನ್ನು ರೈತರಿಂದಲೂ ಪಡೆಯಲಾಗುವುದು.
>
> – ಎಚ್.ಆರ್.ಗವಿಯಪ್ಪ, ಶಾಸಕರು

> ಜಿಲ್ಲೆಯಲ್ಲಿ 0 ರಿಂದ 5 ವರ್ಷದ ಒಳಗಿನ 1,33,429 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. 1034 ಬೂತ್‌ಗಳನ್ನು ಸ್ಥಾಪಿಸಲಾಗಿದೆ. 8 ಸಂಚಾರಿ ತಂಡ, 50 ಟ್ರಾನ್ಸಿಟ್ ತಂಡ, 2184 ಲಸಿಕಾ ಕಾರ್ಯಕರ್ತರು, 180 ಮೇಲ್ವಿಚಾರಕರನ್ನು ಪಲ್ಸ್ ಪೋಲಿಯೋ ಅಭಿಯಾನಕ್ಕೆ ನೇಮಿಸಲಾಗಿದೆ
>
> – ಡಾ.ಶಂಕರ್‌ನಾಯ್ಕ್, ಡಿಎಚ್‌ಒ, ವಿಜಯನಗರ ಜಿಲ್ಲೆ

# ಸ್ವಾಮಿಗಳು ಸಮಾಜದ ಸೇವಕರೆ ಹೊರತು ಮಠದ ಒಡೆಯರಲ್ಲ

### ಜಗದ್ಗುರು ಕೊಟ್ಟೂರು ಬಸವಲಿಂಗ ಸ್ವಾಮಿಗಳು ಹೇಳಿಕೆ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಸ್ವಾಮಿಗಳು ಮಠದ ಒಡೆಯರಲ್ಲ, ಸಮಾಜದ ನಿಷ್ಠಾವಂತ ಸೇವಕರು ಎಂದು ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮಿಗಳು ಹೇಳಿದರು.

ಸಮೀಪದ ಜಿ.ನಾಗಲಾಪುರದ ಶ್ರೀಗುರುಒಪ್ಪತ್ತೇಶ್ವರ ಮಠದಲ್ಲಿ, ನಿರಂಜನಪ್ರಭು ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವದ ನಿಮಿತ್ತ, ಆಯೋಜಿಸಿದ್ದ ಶ್ರೀ ಯಡೆಯೂರು ಸಿದ್ದಲಿಂಗೇಶ್ವರ ಪುರಾಣ, ಪ್ರವಚನ ಪ್ರಾರಂಭೋತ್ಸವ ಹಾಗೂ ಶ್ರೀ ಒಪ್ಪತ್ತೇಶ್ವರ ಸಮುದಾಯಭವನ ಉದ್ಘಾಟನಾ ಸಮಾರಂಭ ಕಾರ್ಯಕ್ರಮದ ದಿವ್ಯಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಯಡೆಯೂರು ಶ್ರೀ ಸಿದ್ದಲಿಂಗೇಶ್ವರರು ಪರಮ ತಪಸ್ವಿಗಳಾಗಿದ್ದರು. ವಿರಕ್ತ ಪರಂಪರೆಯ ಮಠಗಳಿಗೆ ಗುರುಪ್ರಾಯರಾಗಿರುವ ಶ್ರೀ ಯಡೆಯೂರು ಸಿದ್ದಲಿಂಗೇಶ್ವರರ ಮಾತೃಹೃದಯದಿಂದ ಅವರ ಗುರುಪರಂಪರೆಯಲ್ಲಿ ನಾವೆಲ್ಲ ತರಬೇತಿ ಹೊಂದಿ, ಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಸಮಾಜದ ನಿಷ್ಠಾವಂತ ಸೇವೆಗೆ ಅಣಿಯಾದೆವು. ಮಠದ ಜವಾಬ್ದಾರಿ ಸುಲಭವಾದದ್ದು, ಆದರೆ ಸಮಾಜದ ಜವಾಬ್ದಾರಿ ತುಂಬಾ ಕಷ್ಟದ ಕೆಲಸ. ಈ ಸಂಕುಚಿತ ಮನೋಭಾವದ ಸಮಾಜದಲ್ಲಿ ಸ್ವಲ್ಪ ಹೆಚ್ಚುಕಮ್ಮಿಯಾದರೂ ಜನರ ಟೀಕೆಗಳನ್ನು ಎದುರಿಸಬೇಕಾಗುತ್ತದೆ. ಅವರೆಲ್ಲರ ಮನಸ್ಥಿತಿಯನ್ನು ಹೊಂದಿಸಿಕೊಂಡು ಹೋಗುವ ಗುರುತರ ಜವಾಬ್ದಾರಿ ಸ್ವಾಮಿಜಿಗಳದ್ದಾಗಿರುತ್ತದೆ ಎಂದರು.

ಕಾರ್ಯಕ್ರಮಗಳನ್ನು ಆದರ್ಶಮಯವನ್ನಾಗಿ ಮಾಡಲು ಪ್ರವಚನಗಳು ಅತ್ಯವಶ್ಯಕ. ಆದರ್ಶಗಳಿಲ್ಲದ ಜೀವನ ವ್ಯರ್ಥ. ಮನಸ್ಥಿತಿ ಸರಿಯಾಗಬೇಕೆಂದರೆ ಈ ರೀತಿಯ ಪುರಾಣ ಪ್ರವಚನಗಳು ನಮ್ಮ ಜೀವನಕ್ಕೆ ಅತ್ಯವಶ್ಯಕ ಎಂದರು. ಅಲ್ಲದೇ ಪುರಾಣ, ಪ್ರವಚನಗಳು ಮನುಷ್ಯನ ತಪ್ಪು ಹೆಜ್ಜೆಗಳಿಗೆ ಒಂದಷ್ಟು ಬೆಳಕನ್ನು ತೋರಿಸುವ ಮಾರ್ಗದರ್ಶಿಗಳಾಗಿವೆ ಎಂದರು.

ಪಟ್ಟಣದ ಶ್ರೀ ಗುರುಪಾದದೇವರ ಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂದು ಕರ್ನಾಟಕದಲ್ಲಿ ಮಾತ್ರವಲ್ಲದೇ ದೇಶದಾದ್ಯಂತ ಖಾವಿಧಾರಿಗಳು >>3

# ಕೊಟ್ಟೂರೇಶ್ವರ ಸ್ವಾಮಿಯ ಪಾದಯಾತ್ರಿಗಳಿಗೆ ಅನ್ನ ಸಂತರ್ಪಣೆ

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲ್ಲೂಕಿನ ಅರಸೀಕೆರೆ ಗ್ರಾಮದ ಶ್ರೀ ಕೋಲ ಶಾಂತೇಶ್ವರ ಮಠದ ಮಹಾ ಸ್ವಾಮಿಗಳಾದ ಶ್ರೀ ಶಾಂತಲಿಂಗ ದೇಶಿಕೇಂದ್ರ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಮಾತನಾಡಿ, ಕೊಟ್ಟೂರು ಶ್ರೀಗುರು ಬಸವೇಶ್ವರ ರಥೋತ್ಸವಕ್ಕೆ ಇಡೀ ರಾಜ್ಯಾದ್ಯಂತ ಭಕ್ತರು ತನು, ಮನ, ಧನ ಸಮರ್ಪಣೆಯೊಂದಿಗೆ ಭಕ್ತಿಯಿಂದ ಕೊಟ್ಟೂರು ಬಸವೇಶ್ವರ ರಥೋತ್ಸವಕ್ಕೆ ಪಾದಯಾತ್ರೆ ಮೂಲಕ ಬರಿಗಾಲಿನಲ್ಲಿ ನಡೆದುಕೊಂಡು ಬರುತ್ತಿದ್ದಾರೆ.

ಪ್ರತಿವರ್ಷ ಬರುವಂತಹ ಪಾದಯಾತ್ರಿಗಳಿಗೆ ಶ್ರೀ ಕೋಲ ಶಾಂತೇಶ್ವರ ಮಠದ ವತಿಯಿಂದ ಮೂಲಭೂತ ಸೌಕರ್ಯ ಹಾಗೂ ಅನ್ನ ಸಂತರ್ಪಣೆ ಮಾಡಲಾಗುತ್ತದೆ. ಪ್ರತಿಯೊಬ್ಬ ಭಕ್ತಾಧಿಗಳಿಗೆ ಕೊಟ್ಟೂರು ಬಸವೇಶ್ವರ ಸ್ವಾಮಿಯ ಕೃಪಾಶಿರ್ವಾದವಿರಲಿ ಎಂದು ಹೇಳಿದರು.

ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ವೈ.ಡಿ.ಅಣ್ಣಪ್ಪ ಚಾಲನೆ ಮಾತನಾಡಿ, ಕೊಟ್ಟೂರು ಸಾವಿರಾರು ಪಾದಯಾತ್ರೆ ಭಕ್ತಾಧಿಗಳಿಗೆ ಕೋಲ ಶಾಂತೇಶ್ವರ ಮಠದ ವತಿಯಿಂದ ಪ್ರತಿವರ್ಷ ವಿವಿಧ ರೀತಿಯ ಪ್ರಸಾದವಾದ ರೊಟ್ಟಿ, ವಿವಿಧ ರೀತಿಯ ಪಲ್ಯ, ಚಟ್ನಿ, ಪಾಯಸ, ಅನ್ನ, ಸಾಂಬಾರ್ ಹಾಗೂ ಮಜ್ಜಿಗೆಯ ವ್ಯವಸ್ಥೆ ಮಾಡಲಾಗಿದೆ. >>3






## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

**03–03–2024 – ಭಾನುವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ಹರ್ಷಣ |
| ಕರಣ | : ಭವ |
| ಸೂರ್ಯೋದಯ | : 06:47:48 |
| ಸೂರ್ಯಾಸ್ತ | : 18:29:58 |
| ರಾಹು | : 17:02–18:30 |
| ಯಮಘಂಡ | : 12:39–14:07 |
| ಗುಳಿಕ | : 12:15–13:02 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 02–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.54 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 886 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.377 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1604.53 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8082 ಕ್ಯುಸೆಕ್ |
| ಸಾಮರ್ಥ್ಯ | 27.970 ಟಿಎಂಸಿ |




ಹಂಪಿ ಟೈಮ್ಸ್ HAMPI TIMES

## ವಚನ ಅರಿವು

### ನಿನ್ನ ನೀನರಿ

**ಅಂಗ ಮಾಸಿದಲ್ಲಿ ಜಲದೊಲುಮೆ;**
**ಮನ ಮರೆದಲ್ಲಿ ಅರಿವಿನೊಲುಮೆ;**
**ಈ ಉಭಯವು ಮರೆದಲ್ಲಿ ಮಹಾಶರಣರ ಸಂಗದೊಲುಮೆ,**
**ಒಲುಮೆಯ ಒಲವರವ ನಿನ್ನ ನೀನರಿ,**
**ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ.**
**– ಕೋಲ ಶಾಂತಯ್ಯ**

ಕೋಲ ಶಾಂತಯ್ಯನ ವಚನ. ನಮ್ಮ ದೇಹ ಹೊಲಸಾದರೆ ಶುದ್ಧವಾಗಲು ಸ್ನಾನ ಮಾಡುತ್ತೇವೆ. ಹಾಗೇಯೇ ನಮ್ಮೊಳಗಿರುವ ಮನಸ್ಸು ಕೆಟ್ಟ ಆಲೋಚನೆಗಳಿಂದ ಮಲೀನವಾಗುತ್ತದೆ. ಮನಸ್ಸಿನಲ್ಲಿರುವ ಭ್ರಮೆಗಳನ್ನು ಕಳೆದು, ಕೆಟ್ಟ ವಿಚಾರಗಳನ್ನು ಅಳಿಸಿ ಹಾಕಿ ಅರಿವಿನಿಂದ ಅಂದರೆ ಒಳ್ಳೆಯದನ್ನು ಆಲೋಚಿಸುವುದು, ಅದರಂತೆ ಬದುಕುವುದು. ಯಾರಿಗೂ ಕೇಡು ಮಾಡಬಾರದು. ತನ್ನ ತಾನರಿತು ಅರಿವಿನಲ್ಲಿ ಬದುಕಬೇಕು. ದೇಹ, ಮನಸ್ಸನ್ನು ತೊಳೆದುಕೊಂಡು ಭ್ರಮೆ ಕಳೆದು, ಕಾಮ, ಆಸೆ, ಆಮಿಷಗಳನ್ನು ಬಿಟ್ಟು ಶುದ್ಧವಾಗಲು ಸತ್ಯ, ಶುದ್ಧ, ಪ್ರಾಮಾಣಿಕತೆಯಿಂದ ಶರಣತತ್ವವನ್ನು ಅಳವಡಿಸಿಕೊಳ್ಳಬೇಕು ಮತ್ತು ಶರಣತತ್ವವನ್ನು ಜೀವನದಲ್ಲಿ ಬದುಕುವವರ ಸಂಗದಲ್ಲಿದ್ದು, ಜ್ಞಾನವನ್ನು ಪಡೆಯಬೇಕು. ಇನ್ನೂ ಸರಳವಾಗಿ ನಿಮ್ಮ ಕೈಯಲ್ಲೇ ಇರುವ ಶರಣರ ವಚನಗಳನ್ನು ಜೀವನದಲ್ಲಿ ಅನುಸರಿಸಿದರೆ ದೇಹ, ಮನಸ್ಸು, ನಡೆನುಡಿ ಶುದ್ಧವಾಗುತ್ತದೆ. ನಮ್ಮನ್ನು ನಾವು ತಿಳಿದುಕೊಳ್ಳುವ ಬಾಗಿಲು ತೆರೆಯುತ್ತದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038


## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ: ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2023–24ನೇ ಸಾಲಿನ ಪಿಯುಸಿ ಯಿಂದ ಪಿಹೆಚ್‌ಡಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ಹಾಗೂ ವೃತಿಪರ ಮತ್ತು ತಾಂತ್ರಿಕ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆರಿಟ್ ಕಮ್ ಮೀನ್ಸ್ ಶುಲ್ಕ ಮರುಪಾವತಿ ವಿದ್ಯಾರ್ಥಿವೇತನಕ್ಕಾಗಿ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆಯ ಅವಧಿಯನ್ನು ಮಾ.07 ರ ವರೆಗೆ ವಿಸ್ತರಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ಸಮುದಾಯದ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಎಸ್‌ಎಸ್‌ಪಿ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕು ವಿಸ್ತರಣಾಧಿಕಾರಿಗಳ ಕಚೇರಿಗೆ ಭೇಟಿ ನೀಡಬಹುದು. ಜಿಲ್ಲಾ ಹಾಗೂ ತಾಲ್ಲೂಕು ಮಾಹಿತಿ ಕೇಂದ್ರಗಳ ದೂ: ಬಳ್ಳಾರಿ–08392–245755 ಮತ್ತು 8310321101, ಸಿರುಗುಪ್ಪ–9148889975, ಸಂಡೂರು–9036925966 ಹಾಗೂ ಹೆಲ್ಪ್ ಡೆಸ್ಕ್ ನಂ:8277799990 (24*7) ಸಹಾಯವಾಣಿಯ ಮೂಲಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಬಗ್ಗೆ ಮಾಹಿತಿ ಮತ್ತು ತಾಂತ್ರಿಕ ತೊಂದರೆಗಳಿದ್ದಲ್ಲಿ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಾಸ ಸಾಹಿತ್ಯ ಹಾಗೂ ದಾಸ ಕೂಟದ ನೆಲ ಹಂಪಿ



ವಚನ ಸಾಹಿತ್ಯ ಪರಂಪರೆ ಹಾಗೂ ದಾಸ ಸಾಹಿತ್ಯ ಪರಂಪರೆಗಳು ಕನ್ನಡದಲ್ಲಿ ಸಾಹಿತ್ಯಿಕವಾಗಿ ಹಾಗೂ ಸಾಮಾಜಿಕವಾಗಿ ಅತ್ಯಂತ ಮಹತ್ವವನ್ನು ಪಡೆದುಕೊಂಡಿವೆ. ಕರ್ನಾಟಕದ ಸಾಹಿತ್ಯ ಪರಂಪರೆಯಲ್ಲಿ ಭಕ್ತಿ ಮತ್ತು ಆಧ್ಯಾತ್ಮದ ಮೂಲಕ ಜನರನ್ನು ತಲುಪಿದ್ದು ಈ ಎರಡು ಸಾಹಿತ್ಯ ಪ್ರಕಾರಗಳು. ವೈದಿಕ, ಜೈನ ಪರಂಪರೆಯ ನಡುವೆ ಸಮಾಜದಲ್ಲಿ ಅಸಮಾನತೆ, ಮೂಡನಂಬಿಕೆಗಳ ವಿರುದ್ಧ ಎದ್ದು ನಿಂತದ್ದು ವಚನ ಸಾಹಿತ್ಯ. ಇದು 12ನೇ ಶತಮಾನದಲ್ಲಿ ಅತ್ಯಂತ ಪ್ರಮುಖವಾದ ಸಾಹಿತ್ಯಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಕಾರಣವಾಯಿತು. ಇದೇ ರೀತಿ 15 16ನೇ ಶತಮಾನದಲ್ಲಿ ಹರಿದಾಸ ಸಾಹಿತ್ಯದ ಮೂಲಕ ಮತ್ತೆ ಭಕ್ತಿ, ಆಧ್ಯಾತ್ಮದ ಮೂಲಕ ಜನರ ಮನೆಮನೆಗಳನ್ನು ತಲುಪಿದ್ದು ದಾಸ ಸಾಹಿತ್ಯ. ಈ ದಾಸ ಸಾಹಿತ್ಯದ ಪ್ರಮುಖವಾದ ಉದ್ದೇಶವೇ ಭಕ್ತಿ ಮೂಲಕ ಭಗವಂತನನ್ನ ಕಾಣುವುದು. ದಾಸ ಸಾಹಿತ್ಯದ ಪರಂಪರೆಯಲ್ಲಿ ಬಂದ ಅನೇಕರು ಹಾಡುಗಳ , ಕೀರ್ತನೆಗಳ ಮೂಲಕ ಧಾರ್ಮಿಕ, ಆಧ್ಯಾತ್ಮಿಕ ತತ್ವಗಳನ್ನು ಜನರ ಮನೆ ಮನಗಳಿಗೆ ಮುಟ್ಟಿಸುವುದೇ ಆಗಿತ್ತು. ಹೀಗೆ ಹುಟ್ಟಿಕೊಂಡ ದಾಸ ಸಾಹಿತ್ಯ ಪರಂಪರೆಯಲ್ಲಿ ಮೊದಲ ಮೂವರು ಪ್ರಮುಖರೆಂದರೆ ಯತಿಗಳಾಗಿದ್ದ ಶ್ರೀಪಾದರಾಯರು ಶ್ರೀ ವ್ಯಾಸರಾಯರು ಮತ್ತು ಶ್ರೀ ವಾದಿರಾಜರು. ಇವರು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಹೊಂದಿದವರು ಆದರೆ ಧರ್ಮದ ಆಧ್ಯಾತ್ಮದ ಮೂಲಕ ಭಗವಂತನನ್ನ ಕಾಣಲು ಜನರಿಗೆ ಸರಳವಾದ ಆಡು ಮಾತಿನಲ್ಲಿ ಕನ್ನಡ ಸಾಹಿತ್ಯದ ಮೂಲಕ ಹೊಸ ಪರಂಪರೆಯನ್ನು ಸೃಷ್ಟಿಸಿದವರು. ಇಂತಹ ಪ್ರಮುಖ ದಾಸ ಪರಂಪರೆಯ ಶ್ರೇಷ್ಠರು ಹಂಪಿಯ ನೆಲದಲ್ಲಿದ್ದು ಅದನ್ನು ಉತ್ತುಂಗಕ್ಕೆ ಕೊಂಡೊಯ್ದವರು. ಬ್ರಾಹ್ಮಣ ಮತ್ತು ವೈಷ್ಣವರು ಈ ಸಾಹಿತ್ಯ ಪರಂಪರೆಯಲ್ಲಿ ಪ್ರಮುಖವಾಗಿ ಪಾಲ್ಗೊಂಡಿದ್ದರು .ಹೀಗಾಗಿ ಇದನ್ನು ಹರಿದಾಸ ಸಾಹಿತ್ಯ ಹಾಗೂ ಇದನ್ನು ರಚಿಸಿದವರನ್ನು ಹರಿದಾಸ ಕೂಟವೆಂದು ಕರೆಯಲಾಗಿದೆ. ಈ ದಾಸ ಸಾಹಿತ್ಯದ ಪ್ರಮುಖರು ಹಂಪಿಯಲ್ಲಿದ್ದದ್ದು ಗಮನ ಸೆಳೆಯುತ್ತದೆ. ಹೀಗಾಗಿ ದಾಸ ಸಾಹಿತ್ಯದ ಪರಂಪರೆಯ ನೆಲ ಹಂಪಿಯೇ ಆಗಿದೆ.ಈ ಕುರಿತು ಒಂದಿಷ್ಟು ಮಾಹಿತಿ.

ದಾಸ ಸಾಹಿತ್ಯದ ಪ್ರಮುಖ ತತ್ವ ಭಕ್ತಿ. ಈ ಭಕ್ತಿ ಮಾರ್ಗದ ಮೂಲಕ ಭಗವಂತನನ್ನು ತಲುಪುವುದೇ ಆಗಿದೆ. ಹೀಗಾಗಿ ಭಗವಂತನ ಕುರಿತು ಕೀರ್ತನೆಗಳನ್ನು ಹಾಡುವುದರ ಮೂಲಕ ಧಾರ್ಮಿಕವಾದ ಜಾಗೃತಿಯನ್ನು ಮಾಡಿದವರು ದಾಸರು. ಇಲ್ಲಿ ಬಹುತೇಕವಾಗಿ ದಾಸ ಸಾಹಿತ್ಯವನ್ನು ರಚಿಸಿ ಕೀರ್ತನೆಗಳನ್ನು ಹಾಡಿದವರು ಬ್ರಾಹ್ಮಣರೆ ಆಗಿದ್ದರು, ಆದರೆ ಕನಕದಾಸರಥಂಹ ಶೂದ್ರರು ಸಹ ಈ ದಾಸ ಪರಂಪರೆಯಲ್ಲಿ ಒಳಗೊಂಡಿದ್ದು ವಿಶೇಷವಾಗಿದೆ. ದಾಸ ಸಾಹಿತ್ಯ ಜನಸಾಮಾನ್ಯರ ಮಧ್ಯೆ ಹುಟ್ಟಿಕೊಂಡ ಒಂದು ಸಾಹಿತ್ಯ. ದಾಸರು ಊರಿನಲ್ಲಿ ತಿರುಗಾಡುತ್ತಾ ಹಾಡುತ್ತಾ ಕುಣಿಯುತ್ತ ಹೋಗುವಾಗ ತಾವು ಕಂಡ ಸತ್ಯಗಳನ್ನು ಭಾವ ತನ್ಮಯತಿಯಲ್ಲಿ ಹಾಡುತ್ತಾ ಹೋದಂತೆ ಸಾಹಿತ್ಯವಾಯಿತು.ಇವುಗಳು ಶುದ್ಧವಾದ ಸಾಹಿತ್ಯ ಮತ್ತು ಸಂಗೀತದ ನಡುವೆ ರಚನೆಗೊಂಡಂತವು. ವೈರಾಗ್ಯದಿಂದ ಮನೆಮಠಗಳನ್ನು ಬಿಟ್ಟು ಬಂದ ದಾಸರು ಜನರಿಗೆ ಭಕ್ತಿ ,ಜ್ಞಾನ ,ವೈರಾಗ್ಯವನ್ನು ತಮ್ಮ ಕೀರ್ತನೆಗಳ ಮೂಲಕ ಜನರಲ್ಲಿ ಜಾಗೃತಿ ಗೊಳಿಸಿದವರು.ವ್ಯಾಸರಾಯ ಯತಿಗಳು ಹಂಪಿಯಲ್ಲಿದ್ದು ವಿಜಯನಗರದ ನಾಲ್ಕಾರು ಅರಸರಿಗೆ ರಾಜಗುರುಗಳಾಗಿದ್ದವರು ಅದರಲ್ಲೂ ವಿಶೇಷವಾಗಿ ಕೃಷ್ಣದೇವರಾಯನ ಆಸ್ಥಾನದಲ್ಲಿ ಪ್ರಮುಖವಾಗಿ ಗೌರವ ಮನ್ನಣೆಗಳನ್ನು ಪಡೆದಿದ್ದವರು. ಹೀಗಾಗಿ ಕೃಷ್ಣದೇವರಾಯ ವ್ಯಾಸರಾಯರನ್ನು ತನ್ನ ಸಿಂಹಾಸನಾದ ಮೇಲೆ ಕುಳ್ಳಿರಿಸಿ ಕನಕಾಭಿಷೇಕವನ್ನು ಮಾಡಿದ್ದ .ಒಂದು ದಿನ ತನ್ನ ಸಿಂಹಾಸನವನ್ನು ಬಿಟ್ಟುಕೊಟ್ಟಿದ್ದ ಕೃಷ್ಣದೇವರಾಯ,ಇದರಿಂದಾಗಿ ವ್ಯಾಸರಾಯರು ವ್ಯಾಸ ರಾಜರೆಂದೆ ಪ್ರಸಿದ್ಧಿ ಪಡೆದುಕೊಂಡಿದ್ದಾರೆ. ವ್ಯಾಸರಾಯರು ಅಥವಾ ವ್ಯಾಸರಾಜರು ಹಂಪಿಯಲ್ಲಿದ್ದು ಲೋಕಪಾವನ ಎಂಬ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸಿ ಅದರ ಮೂಲಕ ಶಿಕ್ಷಣವನ್ನು ನೀಡಿದವರು. ಮುಂದೆ ಪುರಂದಾಸರು ಕನಕದಾಸರು ಇವರ ಬಳಿ ಬಂದು ಇವರಿಂದ ದೀಕ್ಷೆ ಪಡೆದು ಹರಿದಾಸ ಸಾಹಿತ್ಯವನ್ನು ಪೋಷಿಸಿದವರು. ಪುರಂದಾಸರು ಮತ್ತು ಕನಕದಾಸರು ದಾಸ ಸಾಹಿತ್ಯವನ್ನು ದಾಸ ಪರಂಪರೆಯನ್ನು ಅತ್ಯಂತ ಜನಪ್ರಿಯ ಗೊಳಿಸಿದವರು.




ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ

Scan For Digital Colourful
HAMPI TIMES E-paper

ಸಮಾಜದ ಕಪಟ

ಮೋಸ, ಡಾಂಬಿಕತನ, ಜಾತಿಯ ಪಿಡುಗನ್ನು ಖಂಡಿಸಿ ತಮ್ಮ ಕೀರ್ತನೆಗಳಲ್ಲಿ ಇವುಗಳ ಬಗ್ಗೆ ಜಾಗೃತಿಯನ್ನು ಮೂಡಿಸಿದ್ದಾರೆ.

ದಾಸ ಪರಂಪರೆಯಲ್ಲಿ ಬರುವ ಪ್ರಮುಖ ಯತಿಗಳೆಂದರೆ ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ದಾಸರುಗಳೆಂದರೆ ಪುರಂದಾಸರು, ಕನಕದಾಸರು ನಂತರ ಮಹಿಪತಿ ದಾಸರು, ಪ್ರಸನ್ನ ವೆಂಕಟದಾಸರು, ವಿಜಯದಾಸರು, ಗೋಪಾಲ ದಾಸರು ಜಗನ್ನಾಥದಾಸರು ಮೊದಲಾದ ಸುಮಾರು130ಕ್ಕೂ ಹೆಚ್ಚು ದಾಸ ಶ್ರೇಷ್ಠರು ಸಾವಿರಾರು ಕೀರ್ತನೆಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಮಹತ್ವವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಈ ದಾಸ ಸಾಹಿತ್ಯ ಪರಂಪರೆ ಹಂಪಿಯಲ್ಲಿಯೇ ಕೇಂದ್ರೀಕೃತಗೊಂಡು ದಾಸ ಸಾಹಿತ್ಯಕ್ಕೆ ಅತ್ಯಂತ ಪ್ರಮುಖವಾದ ನೆಲೆಯೆಂದು ಗುರುತಿಸಿಕೊಂಡಿದೆ. ದಾಸ ಸಾಹಿತ್ಯವನ್ನು ಬ್ರಾಹ್ಮಣ ಸಾಹಿತ್ಯವೆಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಆದರೆ ಡಾ. ಮುಗಳಿ ಅವರು ಇದನ್ನು ತಳ್ಳಿ ಹಾಕಿ ಜಾತಿ ಮತ ಮೀರಿದ ತತ್ವ ಮತ್ತು ಸಾಹಿತ್ಯವುಳ್ಳ ಹಾಗೂ ಕನ್ನಡ ಜನರ ಅಂತಕರಣವನ್ನು ಮುಟ್ಟಿದ ಸಾಹಿತ್ಯ ದಾಸ ಸಾಹಿತ್ಯವೆಂದು ಕರೆದಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಶೂದ್ರರಾಗಿದ್ದ ಕನಕದಾಸರು ಮತ್ತು ಮುಸ್ಲಿಂ ಧರ್ಮದ ಪಿಂಜಾರ್ ಬಡೇಸಾಬ್ ರಾಮಾದೂತವರಿಂದ ರಾಮದಾಸನಾದದ್ದು ವಿಶೇಷವಾಗಿ ಗಮನಿಸಬಹುದಾಗಿದೆ. ಹೀಗಾಗಿ ಇದು ಮೇಲ್ನೋಟಕ್ಕೆ ಬ್ರಾಹ್ಮಣ ಸಾಹಿತ್ಯವೆಂದು ,ಮದ್ವ ಸಾಹಿತ್ಯವೆಂದು ಕರೆದರು,ಇದರ ಆಳಕ್ಕೆಇಳಿದಾಗ ಎಲ್ಲಾ ಜಾತಿ ಮತಗಳನ್ನು ಮೀರಿ ಜನಸಾಮಾನ್ಯರನ್ನು ಆಕರ್ಷಿಸಿದ್ದು ಎನ್ನುವುದುವಿಶೇಷವಾಗಿದೆ. ಹಾಗೂ ಎಲ್ಲಾ ಧರ್ಮ ಜಾತಿ ಮತದ ಜನರು ಸಹ ಪುರಂದಾಸರ ಕನಕದಾಸರ ಕೀರ್ತನೆಗಳನ್ನು ಹಾಡುತ್ತಲೇ ಬಂದಿದ್ದಾರೆ.



ದಾಸ ಸಾಹಿತ್ಯ ಅತ್ಯಂತ ಜನಪ್ರಿಯವಾಗಲು ಕಾರಣರಾದವರು ಪುರಂದಾಸರು ತಮ್ಮ ಅನುಭವದ ಮೂಲಕ ಕೀರ್ತನೆಗಳನ್ನು ರಚನೆ ಮಾಡಿ ತಾಳಕ್ಕೆ ತಕ್ಕಂತೆ ಹಾಡುತ್ತ ಕುಣಿಯುತ್ತ ಮನೆ ಮನೆಗಳನ್ನು ತಟ್ಟುವಂತೆಕೀರ್ತನೆಗಳನ್ನು ರಚಿಸಿದವರು.

ಹಂಪಿಗೆ ಬಂದ ಪುರಂದಾಸರು ತಮ್ಮ ಪತ್ನಿಯ ಆಧ್ಯಾತ್ಮದ ಬೆಂಬಲದಿಂದ ದಾಸರಾಗಿ ಪರಿವರ್ತನೆಗೊಂಡವರು .ಹಂಪಿಗೆ ಬಂದ ಪುರಂದಾಸರು ವ್ಯಾಸರಾಯರಿಂದ ದೀಕ್ಷೆ ಪಡೆದು ಮಹತ್ವದ ಸಂಗತಿಗಳನ್ನು ಸಂಗ್ರಹಿಸಿ ಅವುಗಳನ್ನು ತಮ್ಮ ಕೀರ್ತನೆಗಳ ಮೂಲಕ ತಂಬೂರಿ ಹಿಡಿದು ಹಾಡುತ್ತ ಜನರ ಮನೆ ಮನೆಗಳನ್ನು ತಲುಪಿಸಿದ್ದರು .

ದಾಸರ ಎಂದರೆ ಪುರಂದರ ದಾಸರಯ್ಯ, ವಾಸುದೇವ ಕೃಷ್ಣನ ಸೊಸಿ ಪೂಜಿಸುವ ಗ್ರಾಸಕ್ಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು ದಾಸನೆಂದು ತುಳಸಿ ಮಾಲೆ ಧರಿಸಿ, ಬೇಸರಿಲ್ಲದೆ ಅವರ ಕಾಡಿಬೇಡಿ ಬಳಲಿಸುತ,ಕಾಸು ಗಳಿಸುವ ಪುರುಷನವ ಹರಿದಾಸನೆ ಹಾಗಾದರೆ ಖರೆ ದಾಸರೆಂದರೆ ವ್ಯಾಸರಾಯರ ಪ್ರಕಾರ ನೀತಿಯಲ್ಲವ ಮರೆತು ನಿಗಮವೇದ್ಯನ ನಿತ್ಯ ರ್ಣಿಸುತಲಿ ಗೀತನರ್ತನದಿಂದ ಕೃಷ್ಣನ ಪೂಜಿಸುವ ಪೂತಾತ್ಮ ಪುರಂದರದಾಸರಿವಯ್ಯ ಎಂದು ಗುರುಗಳಾಗಿದ್ದ ವ್ಯಾಸರಾಯರಿಂದ ಹೊಗಳಿಸಿಕೊಂಡವರು. ದಾಸರೆಂದರೆ ಪುರಂದರದಾಸರು.ದಾಸಶ್ರೇಷ್ಟ ಪುರಂದಾಸರು ಎಂದು ಗುರುಗಳಿಂದ ಬೆನ್ನುತಟ್ಟಿಸಿಕೊಂಡವರು.

ಮತ್ತೊಬ್ಬ ಜನಪ್ರಿಯ ದಾಸರ ಎಂದರೆ ಕನಕದಾಸರು ತಮಗೆ ಪ್ರಿಯವಾದ ಆದಿಕೇಶವ ನನ್ನ ಆತ್ಮಸಾಕ್ಷಿಯಾಗಿ ಇರಿಸಿಕೊಂಡವರು ಮೂಲತವಾಗಿ ಕನಕದಾಸರು ತಿಮ್ಮಪ್ಪ ಅಥವಾ ತಿಮ್ಮಪ್ಪ ನಾಯಕ ಎಂದು ಮೂಲ ಹೆಸರಿನಿಂದ ಕರೆಸಿಕೊಂಡು ಆದರೆ ತಮ್ಮ ಎಲ್ಲಾ ಅಧಿಕಾರವನ್ನು ತ್ಯಾಗ ಮಾಡಿ ಹಂಪಿಯ ವ್ಯಾಸರಾಯರಿಂದ ದಾಸ ದೀಕ್ಷೆಯನ್ನು ಪಡೆದುಕೊಂಡು ದಾಸರಾದವರು. ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲ ನೆಲೆಯ ನೀನಾದರೂ ಬಲ್ಲಿರಾ ಎಂದು ತಮ್ಮ ಕೀರ್ತನೆಯಲ್ಲಿ ಪ್ರಶ್ನಿಸುವ ಮೂಲಕ ಕನಕದಾಸರು ಜಾತ್ಯತೀತ ಸಮಾಜದ ಕನಸು ಕಂಡವರು ಇವರ ಅತ್ಯಂತ ಜನಪ್ರಿಯ ಕೀರ್ತನೆಯು ಇದಾಗಿದೆ.ಕನಕದಾಸರು ಧಾರ್ಮಿಕ ಮತ್ತು ರಾಜಕಾರಣದಲ್ಲಿನ ಜಾತಿ ಸಮಸ್ಯೆಯನ್ನು ಕಂಡು, ತಮ್ಮ ಈ ಕೀರ್ತನೆಯಲ್ಲಿ ಮನಮುಟ್ಟುವಂತೆ ವಿವರಿಸಿದ್ದಾರೆ.

ದಾಸರ ಕೀರ್ತನೆಗಳಲ್ಲಿ ಧರ್ಮ ನೀತಿ ವೇದಾಂತ ರಾಜಕಾರಣ ಅರ್ಥ ನೀತಿ ಸಾಮಾನ್ಯ ನೀತಿ ವಿನೋದ ಹೀಗೆ ಎಲ್ಲವೂ ಮೂಡಿಬಂದಿವೆ. ಈ ದಾಸ ಪರಂಪರೆ ಶ್ರೀ ನರಹರಿ ತೀರ್ಥರು ಶ್ರೀಪಾದರಾಜರು ವ್ಯಾಸರಾಯರು ವಾದಿರಾಜರು ವಿಜಯೇಂದ್ರ ತೀರ್ಥರು ಹೀಗೆ ಯತಿಗಳಿಂದ ಪ್ರಾರಂಭಗೊಂಡು ಪುರಂದಾಸರು ಕನಕದಾಸರು ಮಹಿಪತಿ ದಾಸರು ವಿಜಯದಾಸರು ಗೋಪಾಲ ದಾಸರು ಹರಪನಹಳ್ಳಿಯ ಭೀಮವ್ವರಿಂದ ಹಿಡಿದು ಹೇಳವನಕಟ್ಟೆಯ ಗಿರಿಯಮ್ಮನವರವರಿಗೆ ಅಂದರೆ 19ನೇ ಶತಮಾನದವರೆಗೆ ದಾಸ ಸಾಹಿತ್ಯ ನಡೆದುಕೊಂಡು ಬಂದಿದೆ ಸುಮಾರು ಐದು ಶತಮಾನಗಳ ಕಾಲ ಈ ದಾಸ ಸಾಹಿತ್ಯ ಜೀವಂತವಾಗಿ ಉಳಿದು ಇಂದಿಗೂ ಜನಪ್ರಿಯ ದಾಸರ ಪದಗಳ ಮೂಲಕ ಜನರ ಸಾಹಿತ್ಯವಾಗಿ ರೂಪಗೊಂಡಿದೆ ಇಂತಹ ದಾಸ ಸಾಹಿತ್ಯ ತುಂಗಭದ್ರ ನದಿ ಮತ್ತು ಕೃಷ್ಣಾ ನದಿಯ ದಡದಲ್ಲಿ ಬೆಳೆದು ಬಂದಿತ್ತು ಎನ್ನುವುದು ಅತ್ಯಂತ ಗಮನಿಸಬೇಕಾದ ಸಂಗತಿಯಾಗಿದೆ.

ಹಂಪಿ ಹೊಳೆಯ ನೆಲದಲ್ಲಿ ಕೇವಲ ದಾಸ ಸಾಹಿತ್ಯವಷ್ಟೇ ನಿರ್ಮಾಣವಾಗಲಿಲ್ಲ ದಾಸಪರಂಪರೆಯ ಮುಂದುವರಿದ ಭಾಗವಾಗಿ ಕರ್ನಾಟಕ ಸಂಗೀತವೂ ಸಹ ಇದೇ ಹಂಪಿಯ ನೆಲೆಯಲ್ಲಿ ಬೆಳೆದು ಬಂದು ಇವತ್ತಿಗೂ ದಕ್ಷಿಣ ಭಾರತದಲ್ಲಿ ಕರ್ನಾಟಕ ಸಂಗೀತವೆಂದು ಮನೆ ಮಾತಾಗಿದೆ.ಇದರ ಪಿತಾಮಹರು ಪುರಂದರದಾಸರು. ಪುರಂದರದಾಸರು ದಾಸ ಸಾಹಿತ್ಯಕ್ಕೆ ಮತ್ತು ಕರ್ನಾಟಕ ಸಂಗೀತಕ್ಕೆ ಕೊಟ್ಟ ಕೊಡುಗೆ ಚಾರಿತ್ರಿಕವಾದದ್ದು ಹೀಗೆ ಸಾಹಿತ್ಯ ಸಂಗೀತ ಪರಂಪರೆ ನೆಲವಾಗಿ ಹಂಪೆ ಇಂದಿಗೂ ಜೀವಂತ ಸಂಸ್ಕೃತಿಯ ಪ್ರತೀಕವಾಗಿದೆ. ಇದಕ್ಕೆ ತುಂಗಾಭದ್ರ ತಟದ ಪುರಂದರ ಮಂಟಪವೇ ಸಾಕ್ಷಿಯಾಗಿ ನಿಂತಿದೆ. ಅನೇಕ ಸಾಹಿತ್ಯ ಸಂಗೀತಾಸಕ್ತರು ದಾಸರ ದರ್ಶನವನ್ನು ಪಡೆದು ಕೆಲಕಾಲ ಮಂಟಪದಲ್ಲಿ ವಿಶ್ರಮಿಸಿ ದಾಸರನ್ನ ನೆನೆಸಿಕೊಂಡು ಮತ್ತೆ ಉತ್ಸಾಹದ ಚಿಲುಮೆಯಾಗಿ ಹಂಪಿಯನ್ನು ನೋಡಲು ಹೊರಡುತ್ತಾರೆ .ವರ್ಷ ಪೂರ್ತಿ ಹಂಪಿಯ ಕಲ್ಲು ಬಂಡೆಗಳ ಮಧ್ಯೆ ಹರಿಯುವ ತುಂಗಭದ್ರ ನದಿಯ ಜುಳು ಜುಳು ನೀರಿನ ಶಬ್ದ,ತಂಗಾಳಿ ಕರ್ನಾಟಕ ಸಂಗೀತದ ಪರಂಪರೆಯನ್ನು ನೆನಪಿಸುತ್ತಿದೆ. ಸಾಹಿತ್ಯ ಸಂಗೀತದ ನೆಲೆಬೀಡಾಗಿರುವುದು ಹಂಪಿಎನ್ನುವುದು ನಮ್ಮೆಲ್ಲರಿಗೂ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

# ನಾವು ಸೀತಾರಾಮನ ಸಂಸ್ಕೃತಿಯವರು: ಸಿಎಂ ಸಿದ್ದರಾಮಯ್ಯ

**ಹಂಪಿ ಟೈಮ್ಸ್ ಕನಕಗಿರಿ :**

ಶ್ರೇಷ್ಠತೆಯ ವ್ಯಸನದಿಂದ 58 ಲಕ್ಷ ಯಹೂದಿಗಳನ್ನು ಹತ್ಯೆ ಮಾಡಿದ ಹಿಟ್ಲರ್ ಕೊನೆಗೆ ಒಬ್ಬ ಹೇಡಿಯಂತೆ ಗುಂಡು ಹಾರಿಸಿಕೊಂಡು ಸತ್ತ. ಇಂಥಾ ಪರಿಸ್ಥಿತಿ ನಮ್ಮ ದೇಶದಲ್ಲಿ ಬರಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಚ್ಚರಿಸಿದರು.

ಕೊಪ್ಪಳ ಜಿಲ್ಲೆಯ ಐತಿಹಾಸಿಕ ಕನಕಗಿರಿ ಉತ್ಸವವನ್ನು ಭವ್ಯವಾದ "ರಾಜಾ ಉಡಚಪ್ಪ ನಾಯಕ" ವೇದಿಕೆಯಲ್ಲಿ ಉದ್ಘಾಟಿಸಿ ಮಾತನಾಡಿದರು. ಇಲ್ಲಿ ಶ್ರೇಷ್ಠರು, ಕನಿಷ್ಠರು ಇಲ್ಲವೇ ಇಲ್ಲ. ತಮ್ಮನ್ನು ತಾವು ಶ್ರೇಷ್ಠರು ಎನ್ನುವವರು, ಮತ್ತೊಬ್ಬರನ್ನು ಕನಿಷ್ಠರು ಎನ್ನುವವರು ಮನುಷ್ಯರೇ ಅಲ್ಲ. ಈ ರೀತಿಯ ಶ್ರೇಷ್ಠತೆಯ ವ್ಯಸನವನ್ನು ಹೋಗಲಾಡಿಸಲು ಬಸವಣ್ಣ, ಅಂಬೇಡ್ಕರ್ ಹೋರಾಟ ಮಾಡಿದರು ಎಂದು ವಿವರಿಸಿದರು. ಸಮಾಜದಲ್ಲಿ ಅಸಮಾನತೆ ಇದೆ. ಇದನ್ನು ಹೋಗಲಾಡಿಸಲು ಏನಾದ್ರೂ ಪ್ರಯತ್ನ ಮಾಡಿದ್ವಾ ಎನ್ನುವ ಕುರಿತು ಪ್ರತಿಯೊಬ್ಬರೂ ತಮ್ಮನ್ನು ಪ್ರಶ್ನಿಸಿಕೊಳ್ಳಬೇಕು ಎಂದರು.



ಚತುರ್ವರ್ಣವ್ಯವಸ್ಥೆ ರೂಪಿಸಿ ಒಬ್ಬರನ್ನು ಶ್ರೇಷ್ಠರು ಉಳಿದವರನ್ನು ಕನಿಷ್ಠರು ಎನ್ನುವ ವ್ಯವಸ್ಥೆ ರೂಪಿಸಿದರು. ಇದನ್ನೇ ಹಿಟ್ಲರ್ ಮತ್ತು ಮುಸಲೋನಿ ಜರ್ಮನಿಯಲ್ಲಿ ಮಾಡಿದ್ದು. ಕೊನೆಗೆ ಅವರಿಗೆ ಯಾವ ಗತಿ ಆಯ್ತು ಎಂದು ಇಡಿ ಮನುಕುಲ ನೋಡಿದೆ ಎಂದರು.

ನಾವು ಅಂಬೇಡ್ಕರ್, ಬುದ್ದ, ಬಸವ, ಕುವೆಂಪು ಮುಂತಾದವರ ವಿಚಾರಗಳನ್ನು ಹೆಚ್ಚೆಚ್ಚು ಪಾಲಿಸುತ್ತಾ ತಾರತಮ್ಯದ ಸಮಾಜವನ್ನು ಹೋಗಲಾಡಿಸಬೇಕು. ಶಿಕ್ಷಣದಿಂದ ವಂಚಿತರಾಗಿದ್ದ ಮಹಿಳೆಯರು, ಶೂದ್ರರಿಗೆ ಶಿಕ್ಷಣ ಸಿಕ್ಕಿದ್ದು ಇವರೆಲ್ಲಾ ಮಹನೀಯರ ಹೋರಾಟದಿಂದ.

ಈ ಚರಿತ್ರೆಯನ್ನು ನೆನಪಿಸುವುದಕ್ಕೇ ನಾವು ವಿಶ್ವ ವಿದ್ಯಾಲಯಕ್ಕೆ ಅಕ್ಕಮಹದೇವಿ ಹೆಸರು ಇಟ್ಟೆ. ಬಸವ ಜಯಂತಿಯ ದಿನವೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದೆ ಎನ್ನುತ್ತಾ ಸಮಾನತೆಯ ಹಾದಿಯಲ್ಲಿ ಸರ್ಕಾರ ಜಾರಿಗೆ ತಂದ ಹಲವು ಭಾಗ್ಯಗಳನ್ನು ವಿವರಿಸಿದರು.

ನಾವು ಯಾವತ್ತೂ ಸೀತಾರಾಮನ ಸಂಸ್ಕೃತಿಯವರು. ಸೀತೆ, ಲಕ್ಷ್ಮಣನನ್ನು ಬಿಟ್ಟು ರಾಮ ಯಾವತ್ತೂ ಒಂಟಿ ಅಲ್ಲ. ರಾಮನನ್ನು ಒಂಟಿ ಮಾಡುವುದಲ್ಲ. ಸಕುಂಟುಂಬ ಸಮೇತನಾದ ಸೀತಾರಾಮ ನಮ್ಮವ ಎಂದರು.

**ಮುಂದಿನ ವರ್ಷ ಕನಕಗಿರಿ ಅಭಿವೃದ್ಧಿ ಪ್ರಾಧಿಕಾರ ರಚನೆ, ಸಿ.ಎಂ.ಮಹತ್ವದ ಘೋಷಣೆ**

ಮುಂದಿನ ವರ್ಷ ಕನಕಗಿರಿ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಲಾಗುವುದು ಎಂದು ಸಿ.ಎಂ. ಇದೇ ಸಂದರ್ಭದಲ್ಲಿ ಮಹತ್ವದ ಘೋಷಣೆ ಮಾಡಿದರು. ಕನಕಗಿರಿ ಉತ್ಸವವನ್ನು ನಿರಂತರವಾಗಿ ನಡೆಸಲು, ಕನಕಗಿರಿಯ ಸರ್ವತೋಮುಖ ಅಭಿವೃದ್ಧಿಗೆ ನಾನು ಮತ್ತು ನಮ್ಮ ಸರ್ಕಾರ ಸದಾ ಬದ್ಧವಾಗಿದೆ.


ಸರ್ವೋದಯ, ಸರ್ವದರ್ಮ, ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟುಕೊಂಡಿರುವವನು ನಾನು. ಈ ದಿಕ್ಕಿನಲ್ಲೇ ನಮ್ಮ ಸರ್ಕಾರ ಮುನ್ನಡೆಯಲಿದೆ. ಕೊಪ್ಪಳ ನನ್ನದೇ ಕ್ಷೇತ್ರ. ಈ ಜಿಲ್ಲೆಯ ಜನರ ಪ್ರೀತಿಗೆ ನಾನು ಸದಾ ಋಣಿ ಎಂದು ಕೃತಜ್ಞತೆ ಸಲ್ಲಿಸಿದರು.

ಶ್ರೀ ವೇದಮೂರ್ತಿ ಭುವನೇಶ್ವರಯ್ಯ ತಾತನವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಉತ್ಸವದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರೂ, ಕೊಪ್ಪಳ ಜಿಲ್ಲಾ ಸಚಿವರಾದ ಶಿವರಾಜ್ ತಂಗಡಗಿ ಸಂಗಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ರಾಯರೆಡ್ಡಿ, ಸಂಸದರಾದ ಕರಡಿ ಸಂಗಣ್ಣ, ಶಾಸಕರಾದ ರಾಘವೇಂದ್ರ ಹಿಟ್ನಾಳ್, ಜನಾರ್ಧನರೆಡ್ಡಿ, ದೊಡ್ಡನಗೌಡ ಪಾಟೀಲ್, ಇಕ್ಬಾಲ್ ಅನ್ಸಾರಿ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

## ಕವಿ ಮನಸು

### ಶ್ರೀ ಗುರುಕೊಟ್ಟೂರೇಶ್ವರ



ಕರುಣಿಸು ಗುರು ಕೊಟ್ಟೂರೇಶ್ವರ
ನಿನ್ನ ಚರಣವನೊಂದಿಗೆ ನಂದೀಶ
ಬಾಳಿನ ಕಹಿಯ ನೀ ಮರೆಸು
ಜೇನಿನ ಸಿಹಿಯ ನೀ ಬೆರೆಸು ...

ಕೊಟ್ಟೂರಲ್ಲಿ ನೆಲೆಸಿಹ ಪವಾಡ ಪುರುಷ
ಭಕ್ತರ ಪಾಲಿಗೆ ನೀ ನೀಡು ಹರುಷ
ಪಂಚಗಣಾಧೀಶ್ವರರು ಭುವಿಗೆ ಬಂದರು
ನಂದೀಶ್ವರರು ಗುರುಬಸವರಾಗಿ
ನಿಂತರು....

ಮೂರ್ಕಲ್ಲ ಮಠದಿಂದ ಹುಚ್ಚನಾಗಿ ಕುಣಿದೆ
ಹರಿಜನರ ಗಿಣ್ಣವನ್ನುಂಡು ಜಾತಿ ಭೇದ
ಅಳಿದೆ.
ಹಿರೇಮಠದಿ ನೆಲೆಸಿ ದರ್ಬಾರ್ ನಡೆಸಿದೆ
ತೊಟ್ಟಿಲ ಮಠದ ಮಕ್ಕಳ ಭಾಗ್ಯವ
ಕರುಣಿಸಿದೆ....

ಗಚ್ಚಿನ ಮಠದಿ ಜೀವಂತ ಯೋಗ
ಸಮಾದಿ
ಇಂದಿಗೂ ಅಲ್ಲಿ ನೆಲೆಸಿ ಪೊರೆವ ತವನಿಧಿ.
ಮಾರ್ಗಶಿರ ಬಹುಳ ಮೂಲ ನಕ್ಷತ್ರದಲ್ಲಿ
ರಥೋತ್ಸವ
ಸೇರುವ ಲಕ್ಷ ಲಕ್ಷ ಭಕ್ತರ ಮನದಿ
ಉತ್ಸವ......

ಕೊಟ್ಟೂರ ಕ್ಷೇತ್ರದ ನೆಲೆಸಿಹ ದೊರೆಯೇ
ಶಿಖಾಪುರವ ಕೊಟ್ಟೂರು ಮಾಡಿದ
ನಿಧಿಯೇ
ಕೊಟ್ಟ ವರಗಳ ಕಾರಣದಿಂದ
ಕೊಟ್ಟೂರಾಯಿತು
ನಿನ್ನ ಪವಾಡಗಳಿಗೆ ಎಂದೂ ಸಾಕ್ಷಿ
ಆಯಿತು....

ಕರಮುಗಿದು ಬೇಡವೇ ಕಳೆಯೊ ಕಷ್ಟಗಳ
ನಿನ್ನಲ್ಲಿ ಶರಣಾಗಿರುವೆ ಈಡೇರಿಸು
ಇಷ್ಟಗಳ.....

– ರೇಣುಕಾ ಕನ್ನಳ್ಳಿ.

### ಶ್ರೀ ಗುರುಬಸವೇಶ್ವರ ರಥೋತ್ಸವ



ಭಕ್ತಿಯ ಕೂಗು
ಮುಗಿಲು ಮುಟ್ಟುತ
ಹರುಷದಿ ಮನವ
ತುಂಬಿಕೊಳ್ಳವವರ
ನೋಡಲು ಬನ್ನಿ

ಹರಕೆಯ ಹೊತ್ತು
ಪಾದಯಾತ್ರೆ ಮಾಡುತ
ಗುರುವಿನ ಪವಾಡವವ
ಹಾಡಿ ಹೊಗಳುವವರ
ನೋಡಲು ಬನ್ನಿ

ಪ್ರಸಾದ ದಾಸೋಹ
ಧಾನ ಧರ್ಮವ ಮಾಡುತ
ಸರ್ವಧರ್ಮದವರು
ಎಳೆಯುವ ತೇರ
ನೋಡಲು ಬನ್ನಿ

ಗುರುಗಳ ಸೇವೆಯ
ಪುಣ್ಯವು ದಕ್ಕಿತು
ಕೊಟ್ಟೂರಿನ ದೊರೆಯೇ
ನಿನಗಾರು ಸರಿಯೇ
ಸರಿಯೆಂದವರ ಹಲ್ಲು ಮುರಿಯೇ......
ಕೂಗಿನಲಿ ಇಡೀ
ಭಕ್ತ ಸಮೂಹವ ತನ್ನತ್ತ
ಸೆಳೆಯುವ ರಥೋತ್ಸವ
ನೋಡಲು ಬನ್ನಿ

- GR ಬಸವರಾಜೇಶ್ವರಿ
ಹಗರಿಗಜಾಪುರ

# ಕೊಟ್ಟೂರೇಶ್ವರ ರಥೋತ್ಸವಕ್ಕೆ ಕೊಟ್ಟೂರು ಪಟ್ಟಣ ಝಗಮಗ

■ **ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಆರಾಧ್ಯ ದೇವರು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವವು ಫೆ-4 ಸೋಮವಾರ ಸಾಯಂಕಾಲ ಅಸಂಖ್ಯಾತ ಭಕ್ತಸ್ತೋಮದಲ್ಲಿ ವಿಜೃಂಭಣೆಯಿಂದ ನೆರವೇರಲಿದೆ.

ಸ್ವಾಮಿ ರಥೋತ್ಸವ ನಿಮಿತ್ತ ದೇವಸ್ಥಾನಕ್ಕೆ ಸಂಪರ್ಕಿಸುವ ಪಟ್ಟಣದ ನಾಲ್ಕು ದಿಕ್ಕುಗಳ ರಸ್ತೆಗಳುದ್ದಕ್ಕೂ ತಳಿರು ತೋರಣಗಳಿಂದ ಅಲಂಕೃತಗೊಳಿಸಲಾಗಿದೆ. ಮೈಸೂರು ದಸರಾ ಮಾದರಿಯಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿ, ರಾತ್ರಿ ವೇಳೆ ಪಟ್ಟಣವು ಝಗ ಮಗಿಸುವಂತೆ ಶೃಂಗರಿಸಿದ್ದಾರೆ.

ಧಾರ್ಮಿಕ ದತ್ತಿ ಇಲಾಖೆ ಇಒ ಬಿ.ಎಂ ಕೃಷ್ಣಪ್ಪ ಮಾತನಾಡಿ, ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವ ನಿಮಿತ್ತ ಅಗತ್ಯ, ಸಿದ್ದತೆ ಕೈಗೊಳ್ಳಲಾಗಿದೆ ಹಾಗೆ ಜಿಲ್ಲಾಧಿಕಾರಿಗಳ ಸೂಚನೆಯಂತೆ ಮೊದಲ ಬಾರಿಗೆ ಪಟ್ಟಣದಲ್ಲಿ ವಿದ್ಯುತ್ ದೀಪಗಳ ಅಲಂಕಾರಕ್ಕೆ ದತ್ತಿ ಇಲಾಖೆ ಮುಂದಾಗಿದ್ದು, ವಿದ್ಯುತ್ ದೀಪಗಳ ಶೃಂಗಾರವು



ಶ್ರೀ ಸ್ವಾಮಿಯ ಜಾತ್ರೆಗೆ ಮತ್ತಷ್ಟು ಮೆರಗು ತಂದಿದೆ ಎಂದು ಭಕ್ತರಿಂದ ಮೆಚ್ಚುಗೆ ವ್ಯಕ್ತವಾಗಿದೆ ಎಂದರು.


ಪಟ್ಟಣದ ಜನ ದಟ್ಟಣಿ ಪ್ರದೇಶಗಳಲ್ಲಿ ಎಲ್.ಇ.ಡಿ ಲೈಟಿಂಗ್ ವ್ಯವಸ್ಥೆ ಕೂಡಾ ಕಲ್ಪಿಸಲಾಗಿದ್ದು ಒಟ್ಟಾರೆ ಇದಕ್ಕೆ ಹೆಚ್ಚುವರಿ 40 ಕಿಲೋ ವ್ಯಾಟ್ಸನ್ ಅವಶ್ಯಕತೆ ಇದ್ದು, ಇದರ ಶುಲ್ಕವನ್ನು ಕೂಡಾ ದೇವಸ್ಥಾನದ ದತ್ತಿ ನಿಧಿಯಿಂದ ಜೆಸ್ಕಾಂಗೆ ಭರಿಸಲಾಗುವುದು ಎಂದು ಮಾಹಿತಿ ನೀಡಿದರು.

ರಥೋತ್ಸವಕ್ಕೆ ಬರುವ ಪಾದಯಾತ್ರೆಗಳಿಗೆ ಪ್ರಥಮ ಚಿಕಿತ್ಸಾ ಕೇಂದ್ರಗಳನ್ನು ಈ ಸ್ಥಳಗಳಲ್ಲಿ ಮರಿಕೊಟ್ಟೂರೇಶ್ವರ ದೇವಸ್ಥಾನ ಹತ್ತಿರ, ಇಟಗಿ ರಸ್ತೆ, ಗಚ್ಚಿನ ಮಠದ ಹತ್ತಿರ, ಉಜ್ಜಿನಿ ರಸ್ತೆ ಹತ್ತಿರ, ಕೂಡ್ಲಿಗಿ ರಸ್ತೆ ಪೆಟ್ರೋಲ್ ಬಂಕ್ ಹತ್ತಿರ, ದೇವಸ್ಥಾನ ಮುಂಭಾಗ ಇರುವ ಕಲ್ಯಾಣ ಮಂಟಪದ ಹತ್ತಿರ ಹಾಗೂ ಶ್ರೀ ಸಾಯಿ ಗ್ಯಾಸ್ ಹತ್ತಿರ ತೆರೆಯಲಾಗಿದೆ ಎಂದರು.

ಭದ್ರತೆಗೆ ಒಂದು ಸಾವಿರ ಪೋಲಿಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ, ನೆರಳು, ಕುಡಿಯುವ ನೀರು, ವಸತಿ, ಶ್ಯಾಮಿಯನ್ ವ್ಯವಸ್ಥೆ ಕಲ್ಪಿಸಲಾಗಿದೆ. ಜಾತ್ರೆಗೆ ಬರುವ ಭಕ್ತಾಧಿಗಳ ವಾಹನ ನಿಲುಗಡೆಗೆ ಸ್ಥಳಗಳನ್ನು ಪಟ್ಟಣವನ್ನು ಸಂಪರ್ಕಿಸುವ ಐದು ರಸ್ತೆಗಳಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.



ಭಕ್ತರು ಹಾಗೂ ಸಾರ್ವಜನಿಕರು ರಥೋತ್ಸವಕ್ಕೆ ದಕ್ಕೆಯಾಗುವಂತೆ ತೆಂಗಿನ ಕಾಯಿ ಹೊಡೆಯುವುದು, ಬಾಳೆ ಹಣ್ಣು ಎಸೆಯುವುದು ಹಾಗೂ ರಥ ಬೀದಿಯಲ್ಲಿ ಮಾರಾಟ ಮಾಡುವುದು, ಅಂಗಡಿ ಹಾಕುವುದನ್ನು ನಿಷೇಧಿಸಲಾಗಿದೆ. ನಿರ್ಲಕ್ಷ್ಯಸಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಜಿಲ್ಲಾ ಆಡಳಿತದ ಸೂಚನೆಯಂತೆ ದೇವಸ್ಥಾನ ಆವರಣ ಮತ್ತು ರಥ ಬೀದಿಯಲ್ಲಿ ಸದಾ ಸ್ವಚ್ಛತೆ ಕಾಯ್ದುಕೊಳ್ಳಬೇಕು.



– ಶ್ರೀ ಕೃಷ್ಣಪ್ಪ.ಬಿ.ಎಂ
ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನ. ಕೊಟ್ಟೂರು.

# ಆಚರಣೆಗಳು ಸಂಸ್ಕಾರ, ಸಂಸ್ಕೃತಿಯ ಸಂಕೇತ ಊರಮ್ಮ ದೇವಿ ಜಾತ್ರೆ ಅರ್ಥಪೂರ್ಣವಾಗಲಿ

## ವಿಜಯನಗರ ಶಾಸಕ ಎಚ್.ಆರ್.ಗವಿಯಪ್ಪ ಹೇಳಿಕೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಜಾಗತಿಕ ಹೊಡೆತದಿಂದ ನಮ್ಮ ಸಂಸ್ಕಾರ, ಸಂಸ್ಕೃತಿಗಳು ಕಣ್ಮರೆಯಾಗುತ್ತಿದ್ದು, ಮುಂದಿನ ಯುವ ಪಿಳಿಗೆಗೆ ಸಂಸ್ಕಾರ, ಸಂಸ್ಕೃತಿಯ ಅರಿವು ಮೂಡಿಸಲು ಆಚರಣೆಗಳ ಮೂಲಕ ಉಳಿಸಿ ಬೆಳೆಸಬೇಕಿದೆ ಎಂದು ಶಾಸಕ ಎಚ್.ಆರ್.ಗವಿಯಪ್ಪ ಹೇಳಿದರು.

ನಗರದ ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದಲ್ಲಿ ಶನಿವಾರ ಗ್ರಾಮ ದೇವತಾ ಊರಮ್ಮ ದೇವಿಯ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಊರಮ್ಮ ದೇವಿಯ ಜಾತ್ರೆಯನ್ನು ಅರ್ಥ ಪೂರ್ಣವಾಗಿ ಆಚರಿಸಬೇಕಿದೆ ಎಂದರು.

ಕೊಟ್ಟೂರು ಸಂಸ್ಥಾನ ಮಠದ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮಿ ಮಾತನಾಡಿ, ಹಿಂದೂ ಧರ್ಮ ವ್ಯಕ್ತಿ, ಜಾತಿ ಪರವಾದ ಧರ್ಮ ಅಲ್ಲ. ಮಾನವೀಯತೆಯ ಸಂಸ್ಕೃತಿಯನ್ನು ಸಾರುವ ಮಾನವ ಧರ್ಮವೇ ಹಿಂದೂಧರ್ಮ. ಧರ್ಮದ ಬಗ್ಗೆ ಅರಿವಿಲ್ಲದವನಿಗೆ ಉಳಿವಿಲ್ಲ. ಧರ್ಮವೆಂದರೇ ಆಚರಣೆಯಲ್ಲಿರಬೇಕು. ಹಿಂದೂ ಎಂದರೆ ಹಿಂಸೆಯಿಂದ ಹಿಂದೆ ಸರಿಯುವವನು. ಮಾನವಧರ್ಮ ನಶಿಸುತ್ತಿರುವ ಈ ದಿನಗಳಲ್ಲಿ ಪುನಃ ಮಾನವವೀಯತೆಡೆಗೆ ಸೆಳೆಯುವುದೇ ಸರ್ವಧರ್ಮ. ಆದ್ದರಿಂದ ಊರಮ್ಮ ದೇವಿ ಜಾತ್ರೆಯನ್ನು ಸರ್ವಧರ್ಮ ಜಾತ್ರೆಯಾಗಿ ಆಚರಣೆ ಮಾಡಬೇಕಿದೆ ಎಂದರು.

ಸಮಾಜ ಸೇವಕ ಎಚ್.ಎನ್.ಎಫ್.ಇಮಾಮ್ ನಿಯಾಜಿ ಮಾತನಾಡಿ, ಧರ್ಮಗಳು ಮಾನವನ ರಕ್ಷಣೆ ಮಾಡುತ್ತಿದೆ. ನಮ್ಮ ಹಿರಿಯರ ಪದ್ಧತಿಯನ್ನು ನಾವು ಆಚರಿಸುವುದು ನಮ್ಮ ಕರ್ತವ್ಯ. ಜಾತಿ, ಧರ್ಮವನ್ನು ಬಿಟ್ಟು ಈ ಹಬ್ಬದಲ್ಲಿ ಪಾಲ್ಗೊಂಡು ಮುಂದಿನ ಪೀಳಿಗೆಗೆ ಶಾಂತಿ ಸಂದೇಶ ಸಾರಬೇಕು ಎಂದರು.

ದೇವಸ್ಥಾನದ ಜನೋದ್ಧಾರ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಬಂಡೆ ಶ್ರೀನಿವಾಸ್ ಮಾತನಾಡಿ, ನಗರದ 34ನೇ ವಾರ್ಡ್ ನ ಗ್ರಾಮ ದೇವತೆ ಊರಮ್ಮ ದೇವಿಯ ಜಾತ್ರಾ ಮಹೋತ್ಸವವನ್ನು ಮಾ.2 ಮತ್ತು 3ರಂದು ಆಯೋಜಿಸಲಾಗಿದೆ. ಆದ್ದರಿಂದ ಮಾ.26 ರಿಂದ ಏ. 01ರ ವರೆಗೆ ದೇವಸ್ಥಾನದಲ್ಲಿ ವಿವಿಧ ಬಗೆಯ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆಯಲಿವೆ. ದೇವಿಯ ಜಾತ್ರೆಯನ್ನು ಜಾತಿ ಧರ್ಮಕ್ಕೆ ಸೀಮಿತಗೊಳಿಸದೆ ಗ್ರಾಮ ದೇವತೆ ಆರಾಧನೆ ಮಾಡಬೇಕಿದೆ ಎಂದರು. ಸಮಾಜದ ಮುಖಂಡರು ಇದ್ದರು.

# ಪೌರಕಾರ್ಮಿಕರ ನೇಮಕಾತಿಗೆ ಆಕ್ಷೇಪಣೆ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರಸಬೆಯಲ್ಲಿ ಖಾಲಿ ಇರುವ 72 ಜನ ಪೌರಕಾರ್ಮಿಕರ ನೇಮಕಾತಿ ಸಂಬಂಧಿಸಿದಂತೆ ಆಕ್ಷೇಪಣೆಗೆ ಆಹ್ವಾನಿಸಲಾಗಿದೆ.

ಕರ್ನಾಟಕ ಪುರಸಭೆಗಳ (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ) ಹುದ್ದೆಗಳಿಗೆ (ವಿಶೇಷ) ನೇಮಕಾತಿ-2022 ರ ರೀತ್ಯಾ ನೇರ ನೇಮಾಕಾತಿಯನ್ನು ಸರ್ಕಾರದ ಅಧಿಸೂಚನೆ ಮೇರೆಗೆ ದಿ. 23.11.2022 ರನ್ವಯ ನೇರ ನೇಮಕಾತಿ ಅಡಿಯಲ್ಲಿ ಹೊಸಪೇಟೆ ನಗರಸಭೆಯಲ್ಲಿ ಖಾಲಿ ಇದ್ದ ಹುದ್ದೆಳಿಗೆ 72 ಜನ ಪೌರಕಾರ್ಮಿಕರನ್ನು ನೇರ ನೇಮಕಾತಿ ಮೂಲಕ ನೇಮಕಾತಿ ಭರ್ತಿ ಮಾಡಲಾಗಿರುತ್ತದೆ. ನೇಮಕಾತಿಗೆ ಸಂಬಂದಿಸಿದಂತೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಏಳು ದಿನಗಳ ಒಳಗಾಗಿ ಲಿಖಿತವಾಗಿ ಪೂರಕ ದಾಖಲೆಗಳೊಂದಿಗೆ ಸಲ್ಲಿಸಬೇಕು ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬದುಕಿನ ನೆಲೆ ಕಂಡುಕೊಳ್ಳಲು ಸಂವಿಧಾನ ಸಹಾಯಕ

■ **ಹಂಪಿ ಟೈಮ್ಸ್ ಬಳ್ಳಾರಿ**

ಸಂವಿಧಾನವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಸಂವಿಧಾನದಿಂದಾಗಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದು, ಎಲ್ಲರೂ ಸಮಾನವಾಗಿ ಬದುಕಿನ ನೆಲೆ ಕಂಡುಕೊಳ್ಳಲು ಸಹಾಯಕವಾಗಿದೆ ಎಂದು ರಾವ್ ಬಹೂದ್ದೂರ್ ವೈ.ಮಹಾಬಲೇಶ್ವರ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಟಿ.ಹನುಮಂತರೆಡ್ಡಿ ಹೇಳಿದರು.

"ಸಂವಿಧಾನ ಜಾಗೃತಿ ಜಾಥಾ" ಕಾರ್ಯಕ್ರಮದ ಅಂಗವಾಗಿ ಸಂವಿಧಾನದ ಆಶಯ ಮತ್ತು ಮೌಲ್ಯಗಳನ್ನು ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ನಗರದ ರಾವ್ ಬಹೂದ್ದೂರ್ ವೈ.ಮಹಾಬಲೇಶ್ವರ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿದ್ದ ಸಂವಿಧಾನದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂವಿಧಾನವು ಬಹಳ ಮಹತ್ವ ಪೂರ್ಣವಾಗಿದ್ದು, ಎಲ್ಲರೂ ಗೌರವಿಸುವರ ಮೂಲಕ, ಅದರ ಮೌಲ್ಯ ಮತ್ತು ಆಶೋತ್ತರಗಳನ್ನು ತಿಳಿದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸಂವಿಧಾನದ ಪ್ರತಿಜ್ಞಾ ವಿಧಿಯನ್ನು ಭೋಧಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿಯವರಾದ ಅಂಬಿಕಾ, ಕಲ್ಲುಡಿ ಬಸವರಾಜ, ಬಸವರಾಜ.ಎನ್ ಹಾಗೂ ಕಾಲೇಜು ವಿದ್ಯಾರ್ಥಿಗಳು, ಬೋಧಕ-ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು

# ಸ್ವಾಮಿಗಳು ಸಮಾಜದ ಸೇವಕರೆ ಹೊರತು ಮಠದ ಒಡೆಯರಲ್ಲ

ಮೊದಲ ಪುಟದಿಂದ

ಕಾಣಲು ಕಾರಣ ಹಾನಗಲ್ ಕುಮಾರಸ್ವಾಮಿಗಳು ಎಂದರೇ ತಪ್ಪಾಗಲಾರದು. ಅಂತವರ ಗರಡಿಯಲ್ಲಿ ತಯಾರಾದವರು ನಿರಂಜನ ಪ್ರಭುಗಳು. ಮರಿಮಹಾಂತ ಸ್ವಾಮಿಗಳನ್ನ ನಾವು ಕಳೆದುಕೊಂಡು ಬಡವಾಗಿದ್ದ ನಮಗೆ ಮಾ.15ರಂದು ಸಮಾಜ ಸೇವೆಗಾಗಿ ತಮ್ಮನ್ನು ತೊಡಗಿಸಿಕೊಳ್ಳಲು ನಿರಂಜನ ದೇಶಿಕರು ಬರಲಿದ್ದಾರೆ. ಜೊತೆಗೆ ಶ್ರೀ ಒಪ್ಪತ್ತೇಶ್ವರ ಮಹಾಸ್ವಾಮಿಗಳ ಸಮಾಜ ಸೇವೆಯ ಜೊತೆ ಜೀವಂತ ಸಮಾದಿಯಾದ ವಿಚಾರಗಳನ್ನು ತಿಳಿಸಿದರು.

ಕಾರ್ಯಕ್ರಮದ ನೇತೃತ್ವವನ್ನು ಗರಗನಾಗಲಾಪುರದ ಶ್ರೀಗುರು ಒಪ್ಪತ್ತೇಶ್ವರ ವಿರಕ್ತರಮಠದ ನಿರಂಜನಪ್ರಭು ದೇಶೀಕರು ವಹಿಸಿಕೊಂಡಿದ್ದರು. ವೇದಿಕೆಯಲ್ಲಿ ಸೋಮಸಮುದ್ರ ಜಗದ್ಗುರು ಕೊಟ್ಟೂರು ಸ್ವಾಮಿ ಶಾಖಾಮಠದ ಸಿದ್ದಲಿಂಗ ದೇಶಿಕರು, ಶ್ರೀಧರಗಡ್ಡೆ ಜಗದ್ಗುರು ಕೊಟ್ಟೂರುಸ್ವಾಮಿ ಶಾಖಾಮಠದ ಮರಿಕೊಟ್ಟೂರು ದೇಶಿಕರು, ವ್ಯಾಕರನಾಳದ ವಿಶ್ವೇಶ್ವರ ದೇವರು, ಬಿಎಂಎಂ ಕಂಪನಿಯ ಗಣೇಶ್ ಹೆಗಡೆ, ವಿಜಯನಗರ ಜಿಲ್ಲಾ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೃಷ್ಣನಾಯ್ಕ್, ವಿಜಯನಗರ ಜಿಲ್ಲಾ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಶಿರಾಜ್ ಶೇಖ್, ಉಪಾಧ್ಯಕ್ಷ ಗಾದಿಗನೂರು ಹಾಲಪ್ಪ, ಸ್ಥಳಿಯಮುಖಂಡರಾದ ಪಾಲಪ್ಪ, ಗಂಡಿಬಸವರಾಜ್, ಅಣ್ಣಿಪಂಪಣ್ಣ, ಸದ್ಯೋಜಾತಶಾಸ್ತ್ರೀ, ಗರಗ ಪ್ರಕಾಶ್, ಹಫೀಜ್ ಶೇಖ್, ಸಿದ್ದಲಿಂಗಸ್ವಾಮಿ, ಹುಲುಮನಿಕೊಟ್ರೇಶ್, ಅವಳಿತೊಟೇಶ ಸೇರಿದಂತೆ ಇತರರಿದ್ದರು. ಶುಕ್ರವಾರ ಮುಂಜಾನೆ ಯಶವಂತನಗರದ ಶ್ರೀ ಸಿದ್ದರಾಮೇಶ್ವರ ವಿರಕ್ತ ಮಠದ ಶ್ರೀ ಮ.ನಿ.ಪ್ರ. ಗಂಗಾಧರ ಮಹಾಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು.ಸಂಜೆ ಬಿಎಂಎಂ ಮತ್ತು ಜೆಎಸ್‌ಡಬ್ಲ್ಯೂ ಕಂಪನಿಯ ಸಹಭಾಗಿತ್ವದಲ್ಲಿ ನಿರ್ಮಾಣಗೊಂಡ ಸಮುದಾಯಭವನ ಲೋಕಾರ್ಪಣೆಗೊಂಡಿತು.

ಕಾರ್ಯಕ್ರಮದಲ್ಲಿ ನಿಡಗುಂದಿಯ ಅನುಭಾವಿಗಳಾದ ಸಿದ್ದಲಿಂಗ ಶಾಸ್ತ್ರಿಗಳು ಪ್ರವಚನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ಶರಣಯ್ಯ ಗವಾಯಿಗಳು ಸಂಗೀತ ನೀಡಿ, ಮಲ್ಲಿಕಾರ್ಜುನ ತಬಲಾ ಸಾಥ್ ನೀಡಿದರು. ನಾರಾಯಣ್ ವಾಯಲಿನ್ ಸಾಥ್ ನೀಡಿದರು.

# ಪಾದಯಾತ್ರಿಗಳಿಗೆ ಅನ್ನಸಂತರ್ಪಣೆ



ಮೊದಲ ಪುಟದಿಂದ

ಹಾಗೂ ಔಷೋಧಪಚಾರಗಳು, ಇನ್ನೂ ಅನೇಕ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ಹೇಳಿದರು.

ಯುವ ಮುಖಂಡ ಪ್ರಶಾಂತ್ ಪಾಟೇಲ್ ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ ಸಹ ಶ್ರೀ ಕೋಲ ಶಾಂತೇಶ್ವರ ಜನಕಲ್ಯಾಣಕೇಂದ್ರದ ವತಿಯಿಂದ ಪ್ರಸಾದದ ವ್ಯವಸ್ಥೆಯನ್ನು ಗುರುಗಳು ಮಾಡಿರುತ್ತಾರೆ, ಸ್ವತಃ ಗುರುಗಳೇ ಅಡುಗೆ ಮಾಡಿ ಬಡಿಸುತ್ತಾರೆ. ಹಾಗೂ ನಮ್ಮ ಊರಿನ ಗಣ್ಯರು ಹಾಗೂ ಸುತ್ತ ಮುತ್ತಲಿನ ಊರಿನ ಮುಖಂಡರ ಸಹಕಾರದಿಂದ ಅನ್ನ ಸಂತರ್ಪಣೆ ಮಾಡಲಾಗುತ್ತದೆ ಎಂದು ಹೇಳಿದರು.

ಬೆಂಗಳೂರಿನಿಂದ ಬಂದಂತಹ ಪಾದಯಾತ್ರೆ ಉಮಾ ಕುಟುಂಬದವರು ಮಾತನಾಡಿ, ಸುಮಾರು 20 ವರ್ಷಗಳಿಂದ ಕೊಟ್ಟೂರಿಗೆ ಪಾದಯಾತ್ರೆ ಬರುತಿದ್ದು, ನಮ್ಮ ಕುಟುಂಬದವರಿಗೆ ಒಳ್ಳೆಯದಾಗಿದೆ, ಪಾದಯಾತ್ರೆ ಮಾಡುವುದರಿಂದ ನಮಗೆ ತೃಪ್ತಿ, ಸಮಾಧಾನ ಸಿಗುತ್ತದೆ. ಆದ್ದರಿಂದ ನಾವೆಲ್ಲರೂ ಪ್ರತಿವರ್ಷ ಬರುತ್ತಿದ್ದೇವೆ.ದಾರಿಯುದ್ಧಕ್ಕೂ ಅತಿಥಿ ಸತ್ಕಾರ, ಔಷಧೋಪಚಾರ ನೀಡುತ್ತಿದ್ದಾರೆ ಎಂದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎ. ಇನಾಯತ್ ಉಲ್ಲಾ, ಬಿ.ರಾಮಣ್ಣ,ಪರುಶುರಾಮ್, ಎ.ಹೆಚ್.ಮಲ್ಲಣ್ಣ, ಕೊಟ್ರೇಶ್, ಷಣ್ಮುಖಪ್ಪ, ಮಂಜುನಾಥ್, ವೃಷಭೇಂದ್ರಯ್ಯ, ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು,ಸಹ ಶಿಕ್ಷಕರು, ಭಕ್ತಾಧಿಗಳು ಹಾಜರಿದ್ದರು.

# ಕೊಟ್ಟೂರು ಪಿಎಲ್ಡಿ ಬ್ಯಾಂಕ್ ಅಧ್ಯಕ್ಷರಾಗಿ ಬಸವೇಶ್ವರ, ಉಪಾಧ್ಯಕ್ಷರಾಗಿ ಸಿದ್ದೇಶ್ವರ ಅವಿರೋಧ ಆಯ್ಕೆ




■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರೇಶ್ವರ ಸಹಕಾರಿ ಬ್ಯಾಂಕ್ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದವರು ರೈತರ ಅಭಿವೃದ್ಧಿಗೆ ಸದಾ ಶ್ರಮಿಸುತ್ತ, ಬ್ಯಾಂಕಿನ ಆರ್ಥಿಕ ಪ್ರಗತಿಗೆ ಒತ್ತು ನೀಡಬೇಕು ಎಂದು ಕೂಡ್ಲಿಗಿ ವಿಧಾನ ಕ್ಷೇತ್ರದ ಶಾಸಕ ಡಾ. ಶ್ರೀನಿವಾಸ್. ಎನ್. ಟಿ ಹೇಳಿದರು

ಕೂಡ್ಲಿಗಿ ತಾಲೂಕು ಕೊಟ್ಟೂರೇಶ್ವರ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಟಿ.ಬಸವೇಶ್ವರ ಮತ್ತು ಉಪ ಅಧ್ಯಕ್ಷರಾಗಿ ಜಿ.ಆರ್ ಸಿದ್ದೇಶ್ವರ ಅವರು ಶನಿವಾರ ಅವಿರೋಧವಾಗಿ ಆಯ್ಕೆಯಾಗಿದ್ದು, ಶಾಸಕರು ಅವರನ್ನು ಭೇಟಿ ಮಾಡಿ ಸನ್ಮಾನಿಸಿ ನಂತರ ಮಾತನಾಡಿದರು. ದೇಶಕ್ಕೆ ಅನ್ನದಾತ ರೈತ ನಮ್ಮ ಕೂಡ್ಲಿಗಿ ತಾಲೂಕಿನ ರೈತರಿಗೆ ಅಗತ್ಯ ಸಹಕಾರ ಸಿಗಬೇಕು. ಮುಂದಿನ ದಿನಮಾನಗಳಲ್ಲಿ ಪ್ರತಿಯೊಬ್ಬರ ಸಹಕಾರದಿಂದ ಹೆಚ್ಚು ಹೆಚ್ಚು ಕೆಲಸ ಮಾಡೋಣ ಎಂದೂ ಹೇಳಿದರು.

ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರಾದ ದೊಡ್ಡರಾಮಣ್ಣ, ಎಂಎಂಜೆ ಹರ್ಷವರ್ಧನ್ ಹಾಗೂ ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಐ.ದಾರುಕೇಶ್ ಕೂಡ್ಲಿಗಿ ಪಟ್ಟಣ ಪಂಚಾಯಿತಿ ಸದಸ್ಯರು ಕಾವಲಿ ಶಿವಪ್ಪ ನಾಯಕ , ಕೂಟ್ಟೂರು ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷರಾದ ತಮ್ಮಣ್ಣ ಎನ್. ವಿ. ಮಾಜಿ ತಾ. ಪಂ. ಸದಸ್ಯರಾದ ಜಿ. ಓಬಣ್ಣ ಪಿಎಲ್ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸತೀಶ್, ಇನ್ನೂ ಮುಂತಾದ ಕೊಟ್ಟೂರು-ಕೂಡ್ಲಿಗಿ ಮುಖಂಡರು, ಬ್ಯಾಂಕ್ ವ್ಯವಸ್ಥಾಪಕರು, ನಿರ್ದೇಶಕರು, ಇತರರು ನೂತನ ಅಧ್ಯಕ್ಷ-ಉಪಾಧ್ಯಕ್ಷರಿಗೆ ಸನ್ಮಾನಿಸಿ ಗೌರವಿಸಿದರು.




ಮೈಕ್ರೋ ನ್ಯೂಸ್

## ಕನ್ನಡ ವಿವಿ ದೂರಶಿಕ್ಷಣ ನಿರ್ದೇಶನಾಲಯದ ತಾತ್ಕಾಲಿಕ ಫಲಿತಾಂಶ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿವಿ ದೂರಶಿಕ್ಷಣ ನಿರ್ದೇಶನಾಲಯ 2021–22ನೇ ಸಾಲಿನ ಪ್ರಥಮ ಹಾಗೂ ಅಂತಿಮ ವರ್ಷದ ಮರುಪರೀಕ್ಷೆ ಹಾಗೂ ಅಂಕಗಳ ಉತ್ತಮೀಕರಣಕ್ಕೆ ಎಂ.ಎ. ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಎಂ.ಜೆ.ಎಂ.ಸಿ. ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪರೀಕ್ಷೆಗಳ ತಾತ್ಕಾಲಿಕ ಫಲಿತಾಂಶ ಪಟ್ಟಿಯನ್ನು ಮಾ.1 ರಂದು ಕನ್ನಡ ವಿಶ್ವವಿದ್ಯಾಲಯದ ಅಂತರಜಾಲ www.kannadauniversity.org ದಲ್ಲಿ ಪ್ರಕಟಿಸಲಾಗಿದೆ.

ಫಲಿತಾಂಶ ಸಂಬಂಧ ಸಂದೇಹವಿದ್ದಲ್ಲಿ, ಕೋರ್ಸ್‌ಗಳಲ್ಲಿ ಉತ್ತೀರ್ಣರಾದ ಹಾಗೂ ಅನುತ್ತೀರ್ಣರಾದ ವಿದ್ಯಾರ್ಥಿಗಳು ಸವಾಲು ಅಥವಾ ಮರು ಮೌಲ್ಯಮಾಪನಕ್ಕೆ ನಿಯಮಾನುಸಾರ ಶುಲ್ಕ ಪಾವತಿಯೊಂದಿಗೆ ಅರ್ಜಿ ಸಲ್ಲಿಸಲು ಮಾ.15 ಕೊನೆಯ ದಿನವಾಗಿದ್ದು, ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಎಂದು ದೂರಶಿಕ್ಷಣ ನಿರ್ದೇಶನಾಲಯ ನಿರ್ದೇಶಕ ಡಾ. ಎನ್. ಚಿನ್ನಸ್ವಾಮಿ ಸೋಸಲೆ ತಿಳಿಸಿದ್ದಾರೆ.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

# ಸೂಕ್ಷ್ಮ ಸಣ್ಣ ಮಧ್ಯಮ ಉದ್ಯಮಗಳು ಆರ್ಥಿಕತೆಯ ಬೆನ್ನೆಲುಬು

## ಬಳ್ಳಾರಿ ಜಿಪಂ ಸಿಇಒ ರಾಹುಲ್ ಶರಣಪ್ಪ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ (ಎಂಎಸ್‌ಎಂಇ) ವಲಯವು ಆರ್ಥಿಕತೆಯ ಬೆನ್ನೆಲುಬಾಗಿದ್ದು, ಸಣ್ಣ ಕೈಗಾರಿಕೆಗಳು ಬೆಳವಣೆಗೆಯಾದರೆ ದೊಡ್ಡ ಕೈಗಾರಿಕೆಗಳು ಬೆಳವಣಿಗೆಗೆ ಸಾಧ್ಯ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಅವರು ಅಭಿಪ್ರಾಯ ಪಟ್ಟರು.



ಸಿಡ್ಬಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕಾಸಿಯಾ ಇವರ ಸಂಯುಕ್ತಾಶ್ರಯದಲ್ಲಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಸವಲತ್ತುಗಳು ಹಾಗೂ ಹಣಕಾಸಿನ ನೆರವು ಕುರಿತು ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಜಾಗೃತಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಮಾನಗಳಲ್ಲಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚೆಚ್ಚು ಪ್ರೋತ್ಸಾಹಿಸಲಾಗುತ್ತಿದೆ. ಹೀಗಾಗಿ ಇಂತಹ ಕಾರ್ಯಗಾರಗಳಲ್ಲಿ ಭಾಗವಹಿಸಿದರೆ ಎಂಎಸ್‌ಎಂಇ ಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು.


ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ.ಮಹಾರುದ್ರ ಗೌಡ ಅವರು ಮಾತನಾಡಿ, ಎಂಎಸ್‌ಎಂಇ ವಲಯಕ್ಕೆ ಸಂಬಂಧಿಸಿದಂತೆ ಇಂತಹ ಜಾಗೃತಿ ಸಭೆಗಳು ಸಂಕಷ್ಟದಲ್ಲಿ ಇರುವ ಅನೇಕ ಕೈಗಾರಿಕೆಗಳ ಪಾಲಿಗೆ ಸಂಜೀವಿನಿ ಆಗಲಿದೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಅವರು ಮಾತನಾಡಿ, ಸಂಕಷ್ಟದಲ್ಲಿರುವ ಬಂಡವಾಳ ಹೂಡಿಕೆದಾರರು ಸರ್ಕಾರದಿಂದ ಪಡೆಯಬಹುದಾದ ಆರ್ಥಿಕ ನೆರವು, ತೆರಿಗೆ ವಿನಾಯಿತಿ, ಪಡೆದ ಸಾಲಕ್ಕೆ ಸಬ್ಸಿಡಿ, ರಫ್ತು ಘಟಕಗಳು ಪಡೆಯಬಹುದಾದ ನಾನಾ ರೀತಿಯ ರಿಯಾಯಿತಿಗಳ ಮಾಹಿತಿ ಆರ್ಥಿಕ ಸದೃಢತೆಗೆ ನೆರವಾಗಲಿದೆ ಎಂದು ತಿಳಿಸಿದರು.

ಬೆಂಗಳೂರಿನ ಕಾಸಿಯಾ ಅಧ್ಯಕ್ಷರಾದ ಶಶಿಧರ್ ಶೆಟ್ಟಿ ಅವರು ಮಾತನಾಡಿ, ಹಣಕಾಸಿನ ನೆರವು ಎಲ್ಲಾ ಸಣ್ಣ ಪ್ರಮಾಣದ ವ್ಯವಹಾರಗಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆ ಕ್ರೆಡಿಟ್ ಆಗಿದೆ ಎಂದು ತಿಳಿಸಿದರು.

ಬೆಂಗಳೂರಿನ ವಿಟಿಪಿಸಿ ಉಪ ನಿರ್ದೇಶಕ ಮನ್ಸೂರ್ ಅವರು, ಇ–ಕಾಮರ್ಸ್ ರಫ್ತು, ಎಂಎಸ್‌ಎಂಇಗಳಿಗೆ ಹೇಗೆ ರಫ್ತು ಮಾಡುವುದು ಮತ್ತು ಇದರ ಅನುಕೂಲಗಳು ಹಾಗೂ ಅನಾನುಕಲಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಗೌರವ ಕಾರ್ಯದರ್ಶಿ ಕೆ.ಸಿ.ಸುರೇಶ್ ಬಾಬು, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ.ಸೋಮಶೇಖರ ಸೇರಿದಂತೆ ಜಿಲ್ಲಾ ಕೈಗಾರಿಕಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಉಪ ಸಮಿತಿಗಳ ಚೇರ್‌ಮನ್‌ಗಳು, ವಿವಿಧ ಕೈಗಾರಿಕೆ ವಲಯಗಳ ಅಧಿಕಾರಿಗಳು, ಪದಾಧಿಕಾರಿಗಳು ಹಾಗೂ ಇತರೆ ಸಂಘ–ಸಂಸ್ಥೆಗಳ ಅಧ್ಯಕ್ಷರು, ಇತರರು ಭಾಗವಹಿಸಿದ್ದರು.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA